ಕೂನುಗಳಿಂದ ಹರಿದು ರಸ್ತೆಯ ಮೇಲೆ ಬೀಳುವ ಆಪ್ಯಾಯಮಾನ ಸದ್ದು ವ್ಯಾಪಿಸಿಕೊಳ್ಳುವ ಬಗೆ. ರಸ್ತೆಯುದ್ದಕ್ಕೂ ಹರಿಯುತ್ತಿರುವ ನೀರಿನ ಮೇಲೆ ಸಾಗುವ ನೀರಗುಳ್ಳೆಗಳ ವಯ್ಯಾರ. ತುಸುವೆ ಬೀಸಿದ ಗಾಳಿಗೆ ಕೋಮಲ ಬೆರಳುಗಳಿಂದ ಚಿಮುಕಿಸಿದ ನೀರಿನಂತೆ ಮುಖವನ್ನು ಆವರಿಸುವ ತುಂತುರಿನ ತುಂಟತನ. ಹಾಡಿನಂತೆಯೇ ಸಾಗಿ ಹೋಗುವ ಮಳೆಯ ಸರುವುಗಳ ಸದ್ದು. ಈ ಇಂಥ ಗಂಧರ್ವ ಗಳಿಗೆಯಲ್ಲೂ ಶಾರದಮ್ಮ ಕುಪಿತಗೊಂಡಿದ್ದಳು. ಕ್ಷುದ್ರಗೊಂಡಿದ್ದಳು. ನಾಲಕ್ಕು ವರ್ಷದ ಹಿಂದೆ ಊರ ಪಂಚಾಯತಿ ಸರ್ಕಾರದ ಯಾವುದೋ ಸ್ಕೀಮಿನಡಿ ಬಿಪಿಎಲ್ ಕಾರ್ಡ್ ಹೊಂದಿರುವ ಬಡವರಿಗೆ ಮನೆಕಟ್ಟಿಸಿಕೊಳ್ಳಲು ಒಂದು ಲಕ್ಷ ಸಹಾಯಧನ ಕೊಡುತ್ತಾರೆಂಬ ಸುದ್ದಿ ತಿಳಿದು ತಾನೂ ಅರ್ಜಿ ಹಾಕಿದ್ದಳು. ಹಾಗೆ ಅರ್ಜಿ ಹಾಕಿದ ಒಂದೆರಡು ತಿಂಗಳುಗಳ ಕಾಲ ಊರವರ ಬಳಿ ತನ್ನ ಮನೆಗೆ ಒದಗಿಬಂದಿರುವ ಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಹೇಳುವುದನ್ನು ರೂಢಿ ಮಾಡಿಕೊಂಡಿದ್ದಳು. ತನಗಿಂತ ಹಿಂದೆ ಅರ್ಜಿ ಹಾಕಿದವರಿಗೆ ಸ್ಕೀಮಿನಡಿ ಹಣ ಮಂಜೂರಾಗತೊಡಗಿದಾಗ ಅನುಮಾನಗೊಂಡು ಪಂಚಾಯತಿ ಆಫೀಸಿನಲ್ಲಿ ವಿಚಾರಿಸಿದ್ದಳು. ಕೆಂಪಿರೆಡ್ಡಿಯ ಕೈಗೆ ಇಪ್ಪತ್ತು ಸಾವಿರ ಕೊಟ್ರೆ ಹಣ ಬಿಡುಗಡೆ ಮಾಡುವುದಾಗಿ ತಿಳಿಸಿದರು. ವ್ಯಗ್ರಗೊಂಡ ಶಾರದಮ್ಮ ಅಲ್ಲಿ ಜೋರು ಗಲಾಟೆ ಮಾಡಿ 'ನಿಮಕೇನು ನ್ಯಾಯ ನೀತಿ ಅಂತಿಲ್ಲೋ... ಲಂಚ ಉಂಡಿಲ್ಲಾಂದ್ರೆ ಮುಂಜಾನೆಕೆ ಪೀಯ ಆಚೆಕೆ ಬರಲ್ವೊ' ಎಂದು ರಗುಲಿ ಹೊರಬಂದಿದ್ದಳು.

ಅದಾದ ಮೇಲೆ ಸರಿಯಾಗಿ ಆರು ತಿಂಗಳಿಗೆ ಹೈವೇಯಿಂದ ಊರಿಗಿರುವ ಎರಡು ಕಿಲೋಮೀಟರ್ ಉದ್ದದ ರಸ್ತೆಯ ಎರಡೂ ತುದಿಗಳಲ್ಲಿ ಒಂದಷ್ಟು ಮೀಟರುಗಳವರೆಗೆ ಟಾರನ್ನು ಹಾಸಲಾಗಿತ್ತು. ಮಿಕ್ಕಂತೆ ನಡುವಿನ ತೊಂಬತ್ತು ಭಾಗ ರಸ್ತೆ ಹಾಗೆಯೇ ಇತ್ತು. ಎಷ್ಟು ಲಕ್ಷ ಹೊಡೆದಿರುವರು ಎಂದುಕೊಂಡ ಶಾರದಮ್ಮ ಮೊಬೈಲಿನಲ್ಲಿ ಫೋಟೊ ತೆಗಿಸಿ, ವಿಡಿಯೊವನ್ನೂ ಮಾಡಿಸಿ ತಹಸೀಲ್ದಾರರ ಬಳಿ ದೂರನ್ನು ಕೊಟ್ಟಿದ್ದಳು. ಆಗ ಕೆಂಪಿರೆಡ್ಡಿ ಶಾರದಮ್ಮಳ ಮೇಲೆ ಒಂದಷ್ಟು ದಿವಸ ಮುನಿಸಿಕೊಂಡವನಂತೆ ವರ್ತಿಸುತ್ತಿದ್ದ. ರಸ್ತೆ ಮಾತ್ರ ಹಾಗೇ ಇತ್ತು. ಒಂದು ದಿನ ಅವನು 'ನಿನ್ನಿಂದ ನಂಕೆಸ್ಟು ಲಾಸಾಯ್ತು ಗೊತ್ತ. ನೀನೂ ಉಣ್ಲಿಲ್ಲ, ನಂಕೂ ಉಣ್ಣಾಕೆ ವದಲ್ಲಿಲ್ಲ... ಯಾವನೋ ಮೆಕ್ಕೊಂಡೋದ' ಎಂದು ಗುಡುಗಿದ್ದ. ಅದಾದ ನಂತರ ಶಾರದಮ್ಮನ ಮೇಲಿನ ಅವನ ಹಗೆ ನಡೆದೇ ಇತ್ತು. ವಸತಿ ಯೋಜನೆಯಡಿ ಪ್ರತಿ ಮನೆಗೆ ಸಿಗುವ ಹಣದ ಮೊತ್ತ ಎರಡು ಲಕ್ಷಕ್ಕೆ ಏರಿದಾಗಲೂ ಅವಳು ಮತ್ತೊಂದು ಅರ್ಜಿಯನ್ನು ಹಾಕಿದಳು. ಆಗ ಕೆಂಪಿರೆಡ್ಡಿ ನೇರವಾಗಿ ಶಾರದಮ್ಮನ ಮನೆಗೆ ಬಂದು 'ನೋಡು ಶಾರದಕ್ಕ, ನಂಕೂ ನಿಂಕೂ ಏನನ್ನ ಇರ್ಲಿ. ಆದ್ರೂ ನಿಂಕೆ ಸ್ಯಾಂಕ್ಷನ್ ಮಾಡಿಸ್ತೀನಿ. ಆದುರೆ ಐವತ್ತು ಸಾವ್ರ ಕಮಿಷನ್ ಕೊಡ್ಬೇಕು. ಇದು ನನ್ನೊಬ್ಬನುಕೆ ಅನ್ಕಂಡ. ಮೇಲಿನವುರ್ಕೆಲ್ಲ ಕೊಡ್ಬೇಕು' ಎಂದು ನುಡಿದಿದ್ದ. ಅದಕ್ಕೆ ಶಾರದಮ್ಮ 'ನಾ ಒಂದು ರುಪಾಯ್ನು ಕೊಡಂಗಿಲ್ಲ. ಅಂಗೆ ಮಾಡಿಸ್ಕೋತೀನಿ ನೋಡ್ತಿರು. ಸಣ್ಣಳ್ಳಿಗೋಳೆ ಇಂಗಿದ್ರೆ ಮತ್ತೆ ಮೇಲೆಂಗೆ? ನಿನ್ನಂತೋರು ನನ ಕಡಪದೊಳುಕೇ ಬಂದು ಏರಗ್ತೀರ. ನಿನ್ನ ಪೀಯಾನ ನಾಯಿ ಕೂಡ ಮೂಸಾಕಿಲ್ಲ... ವೋಗಲೆ' ಎಂದು ನುಡಿದು ಹೊರಗಟ್ಟಿ ಬಾಗಿಲನ್ನು ದಢಾರನೆ ಹಾಕಿದ್ದಳು. ಅಂದಿನಿಂದಲೂ ಅವಳ ಅಲೆದಾಟ ನಡೆದೇ ಇತ್ತು.

ಅಲೆದಾಟದ ದೆಸೆಯಿಂದ ರೋಸಿಹೋಗಿದ್ದ ಅವಳು ಮಳೆ ತಂದ ಅವಾಂತರದಿಂದ ಕುಗ್ಗಿಹೋಗಿದ್ದಳು. ಮಳೆ ಎಲ್ಲರನ್ನೂ ಖುಷಿಗೊಳಿಸಬೇಕಲ್ಲ? ತನ್ನನ್ನೇಕೆ ಹೀಗೆ ಅಳುವಂತೆ ಮಾಡಿಬಿಟ್ಟಿತು. ಅಸಲಿಗೆ ಯಾರನ್ನು ಬೈಯುವುದು? ಮಳೆಯನ್ನೋ... ತನ್ನದೇ ಆದ ಹಟಮಾರಿತನವನ್ನೋ... ಕೆಂಪಿರೆಡ್ಡಿಯಂತ ಅಧಿಕಾರದ ಚುಕ್ಕಾಣಿ ಹಿಡಿದವರ ಹಣದ ದಾಹವನ್ನೊ... ಅವಳ ತಲೆ ಚಿಟ್ಟುಹಿಡಿಯತೊಡಗಿತು. ಅವಳ ಕಂಗಳು ತುಂಬತೊಡಗಿದವು. ನೋಟ ಮಸುಕಾಗತೊಡಗಿತು. ಸೀರೆಯ